ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 18 ಎಲ್ಎಂಡಬ್ಲ್ಯೂ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:25-05-2017.

## ತಿದ್ದುಪಡಿ

ಕರ್ನಾಟಕ ಸರ್ಕಾರವು ಹೋಟೆಲ್ ಅನುಸೂಚಿತ ಉದ್ದಿಮೆಗೆ ಅನ್ವಯಿಸುವಂತೆ ಕನಿಷ್ಠ ವೇತನದ ದರಗಳನ್ನು ಪರಿಷ್ಕರಿಸಿ ಅಂತಿಮ ಅಧಿಸೂಚನೆ ಸಂಖ್ಯೆ: ಕಾಇ 18 ಎಲ್ಎಂಡಬ್ಲ್ಯೂ 2015ನ್ನು ದಿನಾಂಕ:16-9-2016ರಂದು ಹೊರಡಿಸಿ ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ:6-10-2016ರಂದು ಪ್ರಕಟಿಸಿದೆ. ಅದರಲ್ಲಿ ಒಟ್ಟು ಹನ್ನೆರಡು (12) ಷರತ್ತುಗಳನ್ನು ವಿಧಿಸಲಾಗಿತ್ತು. ಈಗ ಕರ್ನಾಟಕ ಸರ್ಕಾರವು ಸದರಿ ಹನ್ನೆರಡು (12) ಷರತ್ತುಗಳೊಂದಿಗೆ ಕೆಳಕಂಡ ಹದಿಮೂರನೇ (13ನೇ) ಷರತ್ತನ್ನು ಸೇರ್ಪಡಿಸುವ ಉದ್ದೇಶದಿಂದ ದಿನಾಂಕ: 23-02-2017ರ ಕರಡು ತಿದ್ದುಪಡಿಯನ್ನು ಸಾರ್ವಜನಿಕರ/ ಉದ್ಯೋಗಿಗಳ/ ಉದ್ಯೋಗದಾತರ/ ಬಾಧಿತ ವ್ಯಕ್ತಿಗಳ ಗಮನಕ್ಕೆ ದಿನಾಂಕ: 28-02-2017ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಎರಡು (2) ತಿಂಗಳ ಕಾಲಾವಕಾಶವನ್ನು ನೀಡಲಾಗಿತ್ತು. ಸ್ವೀಕೃತಗೊಂಡ ಸಲಹೆ/ಆಕ್ಷೇಪಣೆಗಳನ್ನು ಕಾರ್ಮಿಕ ಆಯುಕ್ತರು ಪರಿಶೀಲಿಸಿ ಸರ್ಕಾರಕ್ಕೆ ತನ್ನ ಶಿಫಾರಸ್ಸನ್ನು ನೀಡಿರುತ್ತಾರೆ. ಈ ಅಂತಿಮ ತಿದ್ದುಪಡಿ ಅಧಿಸೂಚನೆಯ ಮೂಲಕ ಕರ್ನಾಟಕ ಸರ್ಕಾರವು ಸದರಿ ಹನ್ನೆರಡು (12) ಷರತ್ತುಗಳೊಂದಿಗೆ ಕೆಳಕಂಡ ಹದಿಮೂರನೇ (13)ನೇ ಷರತ್ತನ್ನು ಸೇರ್ಪಡಿಸಿರುತ್ತದೆ.

**13. ಯಾವುದಾದರೂ "ಹೋಟೆಲ್" ಉದ್ದಿಮೆಯಲ್ಲಿ ಕಾರ್ಮಿಕರಿಗೆ ಆಹಾರವನ್ನು ವೇತನದ ಭಾಗವಾಗಿ ಒದಗಿಸುತ್ತಿದ್ದಲ್ಲಿ, ಅಂತಹ ಕಾರ್ಮಿಕರ ಸಂಬಳದಿಂದ ಆಯಾ ವಲಯಗಳಿಗೆ ನಿಗಧಿತವಾದ ಕನಿಷ್ಠ ವೇತನದಲ್ಲಿ ಯಾವುದು ಅತ್ಯಂತ ಕಡಿಮೆಯೋ ಅದರಲ್ಲಿ ಶೇಕಡ ಹದಿನೈದು (15) ರಷ್ಟು ಕಡಿತವನ್ನು ಮಾಡಬಹುದಾಗಿದೆ.**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

A. N. Radhamani

[ಎ.ಎನ್.ರಾಧಾಮಣಿ]
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.

**ಇವರಿಗೆ,**

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಸರ್ಕಾರದ ಈ ತಿದ್ದುಪಡಿ ಆದೇಶವನ್ನು ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಸದರಿ ಪ್ರಕಟಣೆಯ 500 ಪ್ರತಿಗಳನ್ನು ಪೀಠಾಧಿಕಾರಿ-2, ಕಾರ್ಮಿಕ ಇಲಾಖೆ, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು-1 ಇವರಿಗೆ, ಕಳುಹಿಸುವಂತೆ ಕೋರಲಾಗಿದೆ.

**ಪ್ರತಿಗಳು:-**

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.

...2

2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ. (ಕಾರ್ಮಿಕ ಆಯುಕ್ತರ ಮೂಲಕ).
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು. (ಕಾರ್ಮಿಕ ಆಯುಕ್ತರ ಮೂಲಕ).
4. ನಿರ್ದೇಶಕರು, ವಾರ್ತಾ ಇಲಾಖೆ, ಶಿವಾಜಿನಗರ, ಬೆಂಗಳೂರು.
5. ಸದಸ್ಯ ಕಾರ್ಯದರ್ಶಿ, ಕರ್ನಾಟಕ ಕನಿಷ್ಠ ವೇತನ ಸಲಹಾ ಮಂಡಳಿ, ಕಾರ್ಮಿಕ ಆಯುಕ್ತರ ಕಚೇರಿ, ಕಾರ್ಮಿಕ ಭವನ, ಬೆಂಗಳೂರು.
6. ಎಲ್ಲಾ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳಿಗೆ (ಕಾರ್ಮಿಕ ಆಯುಕ್ತರ ಮೂಲಕ).
7. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.